**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,**
**ದ.ಕ., ಮಂಗಳೂರು.**

| | |
|---|---|
| **ಎಸ್.ಸಿ.ನಂ.55/2016 ಮತ್ತು 161/2021, 80/2023, 188/2018** | |
| ಪ್ರಾ.ಸಾ.14 | ಚಾ.ಸಾ.22 |

| | |
|---|---|
| ಸಾಕ್ಷಿದಾರರ ಹೆಸರು | ರಮೇಶ್ |
| ತಂದೆಯ ಹೆಸರು | ಕಲಕಪ್ಪ |
| ಪ್ರಾಯ | 36 ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಗದಗ |
| ದಿನಾಂಕ | **30.01.2025** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು. |

**ಮುಖ್ಯವಿಚಾರಣೆಃ ಸರಕಾರಿ ಅಭಿಯೋಜಕರಿಂದ.**

ನಾನು 2015 ರಲ್ಲಿ 108 ಆ್ಯಂಬುಲೆನ್ಸ್ ವಾಹನ ನೊಂದಣಿ ಸಂಖ್ಯೆ KA-06-G-567 ರಲ್ಲಿ ಮಂಗಳೂರಿನಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಸದರಿ ವಾಹನವನ್ನು ವೆನ್ಲಾಕ್ ಆಸ್ಪತ್ರೆಗೆ ಸೇರಿಸಲಾಗಿತ್ತು. ದಿನಾಂಕ 02.11.2015 ರಂದು ವೆನ್ಲಾಕ್ ಆಸ್ಪತ್ರೆಯ ಹೆಲ್ತ್ ಆಫೀಸರ್ ರವರು ನನಗೆ ಬೆಳಿಗ್ಗೆ 08.30 ಗಂಟೆಗೆ ದೂರವಾಣಿ ಕರೆ ಮಾಡಿ ಮಂಗಳೂರು ಜಿಲ್ಲಾ ಕಾರಾಗೃಹಕ್ಕೆ ಹೋಗುವಂತೆ ಸೂಚಿಸಿರುತ್ತಾರೆ. ನಮ್ಮ ಆ್ಯಂಬುಲೆನ್ಸ್‌ನಲ್ಲಿ ಆ ದಿನ ಚಾಸಾ-23/ಕಾಂತಾಮಣಿ ರವರು ನರ್ಸ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

2. ನಾವು ತಕ್ಷಣ ಮಂಗಳೂರು ಜಿಲ್ಲಾ ಕಾರಾಗೃಹಕ್ಕೆ ಹೋಗಿ ಒಂದು ವ್ಯಕ್ತಿಯನ್ನು ವೆನ್ಲಾಕ್ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕಕ್ಕೆ ಕರೆದುಕೊಂಡು ಬಂದಿರುತ್ತೇವೆ. ನಂತರ ಪುನಃ ಜಿಲ್ಲಾ ಕಾರಾಗೃಹಕ್ಕೆ ಹೋಗಿ ಗಣೇಶ ಶೆಟ್ಟಿ ಎಂಬ ವ್ಯಕ್ತಿಯನ್ನು ಮಂಗಳೂರಿನ ಎ.ಜೆ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ವೈದ್ಯರು ಗಾಯಾಳುವನ್ನು ಪರೀಕ್ಷಿಸಿದ ನಂತರ ಅಲ್ಲಿಂದ ಶವಾಗಾರಕ್ಕೆ ತೆಗೆದುಕೊಂಡು ಹೋಗಿರುತ್ತೇವೆ.

ಪುನಃ ಎ.ಜೆ ಆಸ್ಪತ್ರೆಯಿಂದ ಮಂಗಳೂರು ಜಿಲ್ಲಾ ಕಾರಾಗೃಹಕ್ಕೆ ಹೋಗಿ ಗಾಯಾಳುಗಳನ್ನು ವೆನ್ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಾನು ಈ ಬಗ್ಗೆ ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ.

**ಪಾಟೀಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ವಿ.ಕೆ. ವಕೀಲರಿಂದ.**

3. ನಾನು ಮಂಗಳೂರಿನಲ್ಲಿ 2015 ರಲ್ಲಿ ಮಹಾಬಲ ಎಂಬ ವ್ಯಕ್ತಿಯ ಕೆಳಗೆ 108 ಆ್ಯಂಬುಲೆನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಕರ್ತವ್ಯ ನಿರ್ವಹಿಸಿದ ಬಗ್ಗೆ ಒಂದು ಪುಸ್ತಕದಲ್ಲಿ ನಮೂದು ಮಾಡುತ್ತಿದ್ದೆ. ಸದರಿ ಪುಸ್ತಕ ಅಥವಾ ಅದರ ಪ್ರತಿಯನ್ನು ತನಿಖಾಧಿಕಾರಿಗಳು ನನ್ನಿಂದ ಪಡೆದುಕೊಂಡಿಲ್ಲ. 108 ನಲ್ಲಿ ನಾವು ಮೆಡಿಕಲ್ ರಿಜಿಸ್ಟರನ್ನು ನಿರ್ವಹಣೆ ಮಾಡುತ್ತೇವೆ. ಸದರಿ ಮೆಡಿಕಲ್ ರಿಜಿಸ್ಟರಿನಲ್ಲಿ ಗಾಯಾಳುವಿನ ಹೆಸರು, ವಯಸ್ಸು, ಅವರನ್ನು ಕರೆತಂದ ಸ್ಥಳ ಮತ್ತು ದಾಖಲಿಸಿದ ಸ್ಥಳವನ್ನು ನಮ್ಮ ವಾಹನದಲ್ಲಿ ಇದ್ದ ನರ್ಸ ರವರು ದಾಖಲಿಸಬೇಕಾಗುತ್ತದೆ. ನಮ್ಮ ವಾಹನ ಪ್ರತೀದಿನ ಯಾವೆಲ್ಲ ಗಾಯಾಳು ಮತ್ತು ರೋಗಿಗಳನ್ನ ಕರೆದುಕೊಂಡು ಬಂದಿರುತ್ತದೆ ಎಂಬ ಬಗ್ಗೆ ದಾಖಲೆಗಳನ್ನು ನಿರ್ವಹಣೆ ಮಾಡಬೇಕು.

4. ಪೊಲೀಸರು ನನ್ನಿಂದ ಹೇಳಿಕೆಯನ್ನು ಹೊರತುಪಡಿಸಿ ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ. ಚಾಸಾ-23 ರವರಿಗೆ ಆ ದಿನ ಹೆಲ್ತ ಆಫೀಸರ ರವರಿಂದ ದೂರವಾಣಿ ಕರೆ ಬಂದಿರುತ್ತದೆ, ನನಗೆ ನೇರವಾಗಿ ಬಂದಿರುವುದಿಲ್ಲ. ಯಾವುದೇ ವ್ಯಕ್ತಿ 108 ಕ್ಕೆ ಕರೆ ಮಾಡಿದಲ್ಲಿ, ಸದರಿ ಕರೆ ಬೆಂಗಳೂರಿನಲ್ಲಿರುವ ಕೇಂದ್ರಿಕೃತ ಕರೆ ಸ್ವೀಕರಣಾ ಕೇಂದ್ರಕ್ಕೆ ಹೋಗಿ, ನಂತರ ಅವರು ನೀಡುವ ಮಾಹಿತಿಯನ್ನು ಆಧರಿಸಿ ನಾವು ಸ್ಥಳಕ್ಕೆ ಹೋಗಬೇಕಾಗುತ್ತದೆ. ವೆನ್ಲಾಕ್ ಆಸ್ಪತ್ರೆಯ ಆವರಣದಲ್ಲಿ ಬಹಳಷ್ಟು ಆ್ಯಂಬುಲೆನ್ಸ್‌ಗಳು ಇರುತ್ತವೆ. ನನಗೆ ನೇರವಾಗಿ ದೂರವಾಣಿ ಕರೆ ಬರದ ಕಾರಣ, ಜಿಲ್ಲಾ ಕಾರಾಗೃಹದಲ್ಲಿ ಎಷ್ಟು ಜನರಿಗೆ ಗಾಯವಾಗಿತ್ತು ಎಂಬ ಬಗ್ಗೆ ನನಗೆ

ಮಾಹಿತಿ ಇರುವುದಿಲ್ಲ.

5. ನಾನು ಜಿಲ್ಲಾ ಕಾರಾಗೃಹಕ್ಕೆ ಹೋದಾಗ ಕಾರಾಗೃಹಕ್ಕೆ ಆವರಣದಲ್ಲಿ ಬೇರೆ ಯಾವುದೇ ಆ್ಯಂಬುಲೆನ್ಸ್‌ಗಳು ಇರಲಿಲ್ಲ. ನಾನು ಮೊದಲಬಾರಿ ಕಾರಾಗೃಹದ ಆವರಣದಿಂದ ಒಬ್ಬ ವ್ಯಕ್ತಿಯನ್ನು ವೆನ್ಲಾಕ್ ಆಸ್ಪತ್ರೆಗೆ ಕರೆತಂದಿರುತ್ತೇನೆ. ನಾನು ಮೊದಲಬಾರಿಗೆ ಹೋದಾಗ ಬೇರೆ ಗಾಯಾಳುಗಳನ್ನು ನಾನು ನೋಡಿಲ್ಲ. ನಾವು ಮತ್ತು ಪೊಲೀಸರು ಮೊದಲಬಾರಿಗೆ ಕಾರಾಗೃಹದ ಆವರಣದಲ್ಲಿ ಗಾಯಾಳುವನ್ನು ಆ್ಯಂಬುಲೆನ್ಸ್‌ಗೆ ಶಿಫ್ಟ್ ಮಾಡಿರುತ್ತೇವೆ. ದೂರವಾಣಿ ಕರೆ ಬಂದ 15 ನಿಮಿಷಗಳಲ್ಲಿ ಮೊದಲಬಾರಿಗೆ ಗಾಯಾಳುವನ್ನು ವೆನ್ಲಾಕ್ ಆಸ್ಪತ್ರೆಗೆ ಜಿಲ್ಲಾ ಕಾರಾಗೃಹದಿಂದ ಕರೆತಂದಿರುತ್ತೇನೆ.

6. ಮೊದಲಬಾರಿಗೆ ಕಾರಾಗೃಹಕ್ಕೆ ಹೋದಾಗಲೇ ಮತ್ತೊಬ್ಬ ಗಾಯಾಳು ಇದ್ದು, ನೀವು ಬರುವಂತೆ ಜೈಲಿನವರು ನನಗೆ ತಿಳಿಸಿದ್ದರು. ನಾನು ಬೇರೆ ಆ್ಯಂಬುಲೆನ್ಸ್ ಚಾಲಕರುಗಳಿಗೆ ಕಾರಾಗೃಹದ ಬಳಿ ಬರುವಂತೆ ದೂರವಾಣಿ ಮೂಲಕ ತಿಳಿಸಿರುವುದಿಲ್ಲ. ನಾನು ಎರಡನೇ ಬಾರಿ ಜಿಲ್ಲಾ ಕಾರಾಗೃಹದ ಬಳಿ ಹೋದಾಗ ಪೊಲೀಸರು ಮತ್ತು ಒಂದೆರಡು ವಾಹನಗಳನ್ನು ನೋಡಿರುತ್ತೇನೆ, ಆದರೆ ಸರಿಯಾಗಿ ಗಮನಿಸಿರಲಿಲ್ಲ. ನಾನು ಮೊದಲ ಬಾರಿಗೆ ಕರೆತಂದ ವ್ಯಕ್ತಿಯನ್ನು ತುರ್ತು ಚಿಕಿತ್ಸಾ ಘಟಕದಲ್ಲಿ ಇರಿಸಿ ನಂತರ ಅವರ ಮಾಹಿತಿಯನ್ನು ಘಟಕದವರಿಗೆ ನೊಂದಾಯಿಸಿ ನಂತರ ತಕ್ಷಣವೇ ಜಿಲ್ಲಾ ಕಾರಾಗೃಹಕ್ಕೆ ಪುನಃ ಹೋಗಿರುತ್ತೇನೆ. ನಾನು ಎರಡನೇ ಬಾರಿ ಜಿಲ್ಲಾ ಕಾರಾಗೃಹಕ್ಕೆ ಹೋದ ಬಗ್ಗೆ ಸಹ ರಿಜಿಸ್ಟರಿನಲ್ಲಿ ನಮೂದಿಸಿರುತ್ತೇನೆ.

7. ಮೊದಲನೇ ವ್ಯಕ್ತಿಯನ್ನು ಆ್ಯಂಬುಲೆನ್ಸ್‌ಗೆ ಹಾಕಿದ ಸ್ಥಳದಲ್ಲಿಯೇ ಎರಡನೇ ವ್ಯಕ್ತಿಯನ್ನು ಸಹ ಜಿಲ್ಲಾ ಕಾರಾಗೃಹದಲ್ಲಿ ನಮ್ಮ ವಾಹನಕ್ಕೆ ಹಾಕಿರುತ್ತಾರೆ. ಎರಡನೇ

ಬಾರಿಯೂ ಸಹ ಗಾಯಾಳುವನ್ನು ನಾನು ಮತ್ತು ಪೊಲೀಸರು ಒಟ್ಟಾಗಿ ಆ್ಯಂಬುಲೆನ್ಸ್‌ಗೆ ಶಿಫ್ಟ್ ಮಾಡಿರುತ್ತೇವೆ. ಗಾಯಾಳು ಮಾತನಾಡುವ ಸ್ಥಿತಿಯಲ್ಲಿ ಇದ್ದನೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನಾನು ಗಮನಿಸಿರಲಿಲ್ಲ. ಚಾಸಾ-23 ರವರು ಸ್ಥಳದಲ್ಲಿ ಗಾಯಾಳುವಿಗೆ ಪ್ರಥಮ ಚಿಕಿತ್ಸೆಯನ್ನು ಕೊಡುವ ಪ್ರಯತ್ನ ಮಾಡಿರುತ್ತಾರೆ. ಗಾಯಾಳುವನ್ನು ವಾಹನಕ್ಕೆ ಸಾಗಿಸುವಾಗ ನನ್ನ ಮತ್ತು ಪೊಲೀಸರ ಬಟ್ಟೆಗಳಿಗೆ ರಕ್ತ ತಾಗಿರುವುದಿಲ್ಲ.

8. ವೆನ್ಲಾಕ್ ಆಸ್ಪತ್ರೆಯಿಂದ ಜಿಲ್ಲಾ ಕಾರಾಗೃಹಕ್ಕೆ ಸುಮಾರು 2 ಕಿ.ಮೀ ದೂರವಾಗುತ್ತದೆ ಮತ್ತು ಆ್ಯಂಬುಲೆನ್ಸ್ ತಲುಪಲು ಸುಮಾರು 4 ನಿಮಿಷಗಳ ಸಮಯ ಆಗುತ್ತದೆ. ಜಿಲ್ಲಾ ಕಾರಾಗೃಹದಿಂದ ಎ.ಜೆ ಆಸ್ಪತ್ರೆಗೆ ಸುಮಾರು 5 ಕಿ.ಮೀ ದೂರವಾಗುತ್ತದೆ. ಜಿಲ್ಲಾ ಕಾರಾಗೃಹದ ಹತ್ತಿರದಲ್ಲಿ ಅಂದರೆ 1 ಕಿ.ಮೀ ವ್ಯಾಪ್ತಿಯಲ್ಲಿ ವೆನ್ಲಾಕ್ ಆಸ್ಪತ್ರೆ, ಕೆ.ಎಂ.ಸಿ ಮತ್ತು ಯೆನಪೊಯ ಆಸ್ಪತ್ರೆಗಳು ಇರುತ್ತವೆ. ಜೈಲಿನ ಅಧಿಕಾರಿಯವರ ಸೂಚನೆಯಂತೆ ಎರಡನೇ ಬಾರಿ ಗಾಯಾಳುವನ್ನು ನಾನು ಎ.ಜೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಾನು ಎ.ಜೆ ಆಸ್ಪತ್ರೆಗೆ ಗಾಯಾಳುವನ್ನು ತಲುಪಿಸುವ ವೇಳೆಗೆ ಅವರಿಗೆ ಜೀವ ಇರಲಿಲ್ಲ.

9. ಎ.ಜೆ ಆಸ್ಪತ್ರೆಯ ವೈದ್ಯರಿಗೆ ಗಾಯಾಳುವನ್ನು ಎಲ್ಲಿಂದ ಕರೆತರಲಾಗಿದೆ ಎನ್ನುವ ಬಗ್ಗೆ ಮಾಹಿತಿಯನ್ನು ನೀಡಿರುತ್ತೇನೆ. ನಾನು ಪುನಃ ಜಿಲ್ಲಾ ಕಾರಾಗೃಹಕ್ಕೆ ಬಂದಾಗ ಎ.ಜೆ ಆಸ್ಪತ್ರೆಗೆ ದಾಖಲಿಸಿದ ಗಾಯಾಳು ಮೃತನಾಗಿರುವ ಬಗ್ಗೆ ಮಾಹಿತಿಯನ್ನು ನೀಡಲಿಲ್ಲ. ನನ್ನನ್ನು ದೂರವಾಣಿ ಮೂಲಕ ತನಿಖಾಧಿಕಾರಿಗಳು ವಿಚಾರಿಸಿರುತ್ತಾರೆ, ಆದರೆ ಖುದ್ದಾಗಿ ವಿಚಾರಣೆ ಮಾಡಿರುವುದಿಲ್ಲ. ನಾನು KA-06-G-567 ನೊಂದಣಿ ಸಂಖ್ಯೆಯ 108 ವಾಹನದಲ್ಲಿ ದಿನಾಂಕ 02.11.2015 ರಂದು ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಮತ್ತು ಆ ದಿನ ಜಿಲ್ಲಾ ಕಾರಾಗೃಹಕ್ಕೆ 3 ಬಾರಿ ಹೋಗಿ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಿರುವುದಿಲ್ಲ ಎಂದರೆ

ಸರಿಯಲ್ಲ. ಪ್ರಕರಣಕ್ಕಾಗಿ ತನಿಖಾಧಿಕಾರಿಗಳು ಸೃಷ್ಟಿಸಲಾದ ಸುಳ್ಳು ಸಾಕ್ಷಿ ಎಂದರೆ ಸರಿಯಲ್ಲ.

**ಪಾಟೀಸವಾಲುಃ** ಉಳಿದ **ಆರೋಪಿತರ ಪರ ವಕೀಲರಿಂದ.**

ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.